ಸಾಕ್ಷಿಯನ್ನು ದಿಃ 17-11-2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟೀಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಡಿ.ಎನ್.ಎಸ್ ರವರಿಂದಃ

1. ನನ್ನ ಪ್ರಕಾರ ಈ ಘಟನೆ ನಡೆದದ್ದು ದಿಃ 28-02-2020 ರಂದು ಬೆಳಿಗ್ಗೆ 8-30 ಗಂಟೆಗೆ . ಜಾಗದ ವಿಚಾರವಾಗಿ ನನ್ನ ಹಾಗೂ ಆರೋಪಿಯ ನಡುವೆ ವೈಶಮ್ಯ ಇದೆ . ಪ್ರಸನ್ನ ಕುಮಾರ್ ನನ್ನ ಮಗ . ರಕ್ಷಾ ಸುವರ್ಣಾ ರವರು ನನ್ನ ಸೊಸೆ . ನನ್ನ , ನನ್ನ ಮಗ, ಸೊಸೆಯ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು . ಆ ಪ್ರಕರಣ ದಿಃ 28-02-2020 ರಂದು ಬೆಳಿಗ್ಗೆ 8-30 ಗಂಟೆಗೆ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು . ಆರೋಪಿಯ ಮೇಲೆ ಕತ್ತಿಯಿಂದ ಕಡಿದ ಬಗ್ಗೆ ನಾನು , ನನ್ನ ಸೊಸೆ ಹಾಗೂ ನನ್ನ ಮಗ , ಆರೋಪಿಯ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದೇವೆ ಎಂಬುದಕ್ಕೆ ಸಂಬಂಧಿಸಿದ ಮಂಗಳೂರಿನ 3ನೇ ಸೆಷನ್ಸ್ ನ್ಯಾಯಾಲಯದಲ್ಲಿ ನಿಮಗೆ ಶಿಕ್ಷೆ ಘೋಷಣೆಯಾಗಿದೆ . ಸದರಿ ಪ್ರಕರಣದ ತೀರ್ಪಿನ ಪ್ರತಿಯನ್ನು ಸಾಕ್ಷಿ ನೋಡಿ ಒಪ್ಪಿದ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು .

2. ನಾವು ಕತ್ತಿಯಿಂದ ಆರೋಪಿಗೆ ಹಲ್ಲೆ ಮಾಡಿದ ಕಾರಣ ಆರೋಪಿ ಆ ಸಮಯದಲ್ಲಿ ಆಸ್ಪತ್ರೆಯಲ್ಲಿ ಇದ್ದರು ಎಂದರೆ ಸಾಕ್ಷಿ ನಾವು ಸಹ ಆಸ್ಪತ್ರೆಗೆ ಹೋಗಿದ್ದೆವು ಎಂದು ಹೇಳಿರುತ್ತಾರೆ . ನಾವು ಆರೋಪಿಯ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ ಅಪರಾಧಕ್ಕಾಗಿ ಭಾರತೀಯ ಸಂಹಿತೆ ಕಲಂ 307 ರಡಿಯಲ್ಲಿ ನಮ್ಮ ವಿರುದ್ಧವಾಗಿ ಶಿಕ್ಷೆ ರುಜುವಾತಾಗಿದೆ ಎಂದರೆ ಸರಿ . ಇದಕ್ಕಾಗಿ ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳುವ ಉದ್ದೇಶದಿಂದ ಈ ಸುಳ್ಳು ದೂರನ್ನು ಆರೋಪಿಯ ವಿರುದ್ಧ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

3. ಆರೋಪಿ ನಮ್ಮ ವಿರುದ್ಧ ಸುಮಾರು 2 ರಿಂದ 3 ಸಲ ದೂರನ್ನು ದಾಖಲು ಮಾಡಿದ್ದಾರೆ . ನಮ್ಮ ಮನೆ ಹಾಗೂ ಆರೋಪಿಯ ಮನೆ ಅಕ್ಕ-ಪಕ್ಕದಲ್ಲಿ ಇದೆ . ನಮ್ಮ ಮನೆಯ ಬಚ್ಚಲು ನೀರು ಅವರ ಮನೆಗೆ ನಾವು ಬಿಡುತ್ತೇವೆ ಎಂದು ಆರೋಪಿ ನಮ್ಮ ವಿರುದ್ಧವಾಗಿ ಇನ್ನೊಂದು ಪ್ರಕರಣವನ್ನು ದಾಖಲು ಮಾಡಿದ್ದಾರೆ . ಆರೋಪಿ ನಮ್ಮ ಮೇಲೆ ಚೂರಿಯಿಂದ ಹಲ್ಲೆ ಮಾಡಿದ್ದಾನೆ ಎಂದು ನಾವು ಸುಳ್ಳು ದೂರು ದಾಖಲು ಮಾಡಿದ್ದೇವೆ ಎಂದರ ಸರಿಯಲ್ಲ. ಆ ಪ್ರಕರಣ ಸಿ.ಸಿ. 838/2020 ಆಗಿದ್ದು, ಅದರಲ್ಲಿ ನಾವು ನ್ಯಾಯಾಲಯಕ್ಕೆ ಬಂದು ಆರೋಪಿಯ ವಿರುದ್ಧ ಸಾಕ್ಷ್ಯ ನುಡಿಯದ ಕಾರಣ ಆರೋಪಿ ಬಿಡುಗಡೆಯಾಗಿದ್ದಾನೆ ಎಂದರೆ ಸರಿ ಎಂದು ಸಾಕ್ಷಿಯು ಸಿ.ಸಿ. 838/2020ರ ಪ್ರಕರಣದ ತೀರ್ಪಿನ ಪ್ರತಿಯನ್ನು ನೋಡಿ ಗುರುತಿಸಿದ ಮೇರೆಗೆ , ಅದನ್ನು ನಿಡಿ-2 ಎಂದು ಗುರುತಿಸಲಾಯಿತು .

4. ನಮ್ಮ ಮನೆಯ ಪಕ್ಕದಲ್ಲಿ ಕಪ್ಪು ಕಲ್ಲಿನ ಕೋರೆ ಇದೆ . ನಮ್ಮ ಜಾಗದ ಪಕ್ಕದಲ್ಲಿ ಸುಮಾರು 20 ಮಂದಿ ಕೋರೆ ಕೆಲಸ ಮಾಡುವವರು ಶೆಡ್ ನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ . ಆ ಜಾಗ ಘಟನಾ ಸ್ಥಳಕ್ಕೆ ಹತ್ತಿರದ ಜಾಗವಾಗಿದೆ . ಗಲಾಟೆಯಾಗುವ ಸಂದರ್ಭದಲ್ಲಿ ಆ ಕೆಲಸಗಾರರು ಯಾರು

ಸಹ ಬಂದಿರುವುದಿಲ್ಲ . ಘಟನೆಯಾದ ನಂತರ ಯಾವಾಗ ಪೊಲೀಸರು ಸ್ಥಳಕ್ಕೆ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ , ನಾನು ಆಸ್ಪತ್ರೆಯಲ್ಲಿ ಇದ್ದೆ . ಆರೋಪಿ ಚೂರಿಯಿಂದ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾನೆ . ಪೊಲೀಸರೇ ಚೂರಿಯನ್ನು ತಂದು ನನಗೆ ತೋರಿಸಿರುತ್ತಾರೆ .

5. ನನ್ನನ್ನು ಕೇಳಿ ಪೊಲೀಸರು ದೂರು ಅರ್ಜಿಯನ್ನು ಬರೆದಿರುತ್ತಾರೆ . ಪೊಲೀಸರನ್ನು ನಾನು ಬರಲು ಹೇಳಿರುವುದಿಲ್ಲ , ಅವರೇ ಬಂದಿರುತ್ತಾರೆ . ಜಾಗಕ್ಕೆ ಸಂಬಂಧಿಸಿದಂತೆ ತುಂಬಾ ಸಲ ಜಗಳ ಆಗಿದೆ . ಈ ಪ್ರಕರಣದ ಬಾಬ್ತು ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ . ಘಟನೆಯನ್ನು ನೋಡಲು ಯಾರು ಬಂದಿರುವುದಿಲ್ಲ . ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ . ನಾನು ಸುಳ್ಳು ದೂರುಗಳನ್ನು ಆರೋಪಿಯ ವಿರುದ್ಧ ಆಗಾಗ ದಾಖಲು ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ . ಜಮೀನಿಗೆ ಸಂಬಂಧಿಸಿದಂತೆ ನಾನು ಹಲವಾರು ದೂರಗಳನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ